**ಸಾಕ್ಷಿಗೆ ದಿನಾಂಕ:09-09-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲು :: ಆರೋಪಿ ಪರ ಶ್ರೀ. HSN ವಕೀಲರಿಂದ ::**

ಆರೋಪಿಯು ನನ್ನ ಪಕ್ಕದ ಊರಿನವರಾದ ಕಾರಣ ಸುಮಾರು 10 ವರ್ಷದಿಂದ ನನಗೆ ಪರಿಚಯ ಇರುವ ವ್ಯಕ್ತಿ ಆಗಿರುತ್ತಾರೆ. ಪ್ರಕರಣ ಹೂಡುವ 4 ವರ್ಷಗಳ ಹಿಂದಿನಿಂದ ಆರೋಪಿ ನನಗೆ ಪರಿಚಯ ಇರುತ್ತಾರೆ. ನನ್ನ ಊರು ನೇರಳಕೆರೆ ಆಗಿರುತ್ತದೆ. ಆರೋಪಿಯ ಊರು ಅಮೃತಾಪುರ ಆಗಿರುತ್ತದೆ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ 6 ಲಕ್ಷ ರೂಪಾಯಿ ಹಣವನ್ನು ನಗದಿನ ಮುಖಾಂತರ ಸಾಲವಾಗಿ ನೀಡಿರುತ್ತೇನೆ. ಆರೋಪಿಗೆ ಸಾಲ ಕೊಡುವ ಸಮಯದಲ್ಲಿ ನನ್ನನ್ನು ಮತ್ತು ಆರೋಪಿ ಹೊರತುಪಡಿಸಿ ಇತರೇ ಯಾವುದೇ ವ್ಯಕ್ತಿಗಳು ಇರಲಿಲ್ಲ. ನಾನು ಆರೋಪಿಗೆ 6 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ಯಾವತ್ತು ಸಹ ನೀಡದಿದ್ದರೂ ಸುಳ್ಳು ಕತೆಗಳನ್ನು ಸೃಷ್ಟಿಸಿ ಈ ಸುಳ್ಳು ಪ್ರಕರಣವನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ನಿಪಿ1 ಚೆಕ್ ಅನ್ನು ಡಿಸೆಂಬರ್ 2018 ರಿಂದ ಜನವರಿ 2019 ಮಧ್ಯದಲ್ಲಿ ನೀಡಿರಬಹುದು, ನಿಖರವಾದ ದಿನಾಂಕ ನೆನಪಿಲ್ಲ. ನಿಪಿ1 ಚೆಕ್ ನಲ್ಲಿ ಇರುವ ಅಂಶಗಳನ್ನು ನಾನೇ ತುಂಬಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿಯು ಹೇಳಿದ ಮೇರೆಗೆ ನಾನು ತುಂಬಿಸಿರುತ್ತೇನೆ. ನಿಪಿ1 ರಲ್ಲಿ ಕಂಡು ಬರುವ ದಿನಾಂಕವನ್ನು ಸಹ ನಾನೇ ತುಂಬಿಸಿರುತ್ತೇನೆ ಎಂದರೆ ಸಾಕ್ಷಿಯು ಆರೋಪಿಯು ಹೇಳಿದ ಮೇರೆಗೆ ತುಂಬಿಸಿರುತ್ತೇನೆ ಎಂದು ನುಡಿಯುತ್ತಾರೆ. ಆದರೆ ನಿಪಿ1 ಚೆಕ್ ನಲ್ಲಿ ಇರುವ ಸಹಿ ಆರೋಪಿಯದ್ದಾಗಿರುತ್ತದೆ. ನಿಪಿ1 ಚೆಕ್ ನಲ್ಲಿ ಇರುವ ಸಹಿಯನ್ನು ಸಹ ನಾನೇ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಕಳೆದುಕೊಂಡಿರುವ ಚೆಕ್ ಅನ್ನು ನಾನು ಪಡೆದುಕೊಂಡು ಸಹಿ ಹಾಕಿ ಈ ಸುಳ್ಳು ಪ್ರಕರಣವನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ನಾನು ಆರೋಪಿಗೆ 6 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ಡಿಸೆಂಬರ್ 2018 ರಿಂದ ಜನವರಿ 2019 ಮಧ್ಯದಲ್ಲಿ ನೀಡಿರಬಹುದು, ನಿಖರವಾದ ದಿನಾಂಕ ನೆನಪಿಲ್ಲ. ನನಗೆ 6 ಲಕ್ಷ ರೂಪಾಯಿ ಹಣವು ಅಡಿಕೆ

ಮಾರಾಟದಿಂದ ಬಂದಿರುತ್ತದೆ. ಅದಕ್ಕೆ ಪೂರಕವಾಗಿ ದಾಖಲಾತಿಗಳು ನನ್ನ ಬಳಿ ಈಗ ಇರುವುದಿಲ್ಲ. ಕಾರಣ ನಾನು ಅದನ್ನು ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿರುತ್ತೇನೆ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಬಿಲ್ ವ್ಯವಹಾರ ಆಗುವುದಿಲ್ಲ. ನನ್ನ ವ್ಯವಹಾರಗಳನ್ನು ನಗದಿನ ಮುಖಾಂತರ ಮಾಡುತ್ತೇನೆ, ಆದರೆ ಸ್ವಲ್ಪ ಮಟ್ಟಿಗೆ ಬ್ಯಾಂಕ್ ವ್ಯವಹಾರವನ್ನು ಸಹ ಮಾಡುತ್ತೇನೆ. ನಿಪಿ1 ಚೆಕ್ ನಲ್ಲಿ ಇರುವ ಸಹಿ ಆರೋಪಿಯದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ಚೆಕ್ ಕಳುವಾಗಿರುವ ಬಗ್ಗೆ ಆರೋಪಿ ಬ್ಯಾಂಕ್ ಗೆ ಮಾಹಿತಿ ಸಹ ನೀಡಿದ್ದರು, ಸದರಿ ಚೆಕ್ ಅನ್ನು ನಾನು ಪಡೆದು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿಗೆ ಯಾವುದೇ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಚೆಕ್ ನನಗೆ ಸಿಕ್ಕ ಹಲವಾರು ದಿನಗಳ ನಂತರ ಆರೋಪಿಯ ಮಾಹಿತಿ ಹಾಗೂ ಸಹಿಗಳ ಬಗ್ಗೆ ತಿಳಿದುಕೊಂಡು ತುಂಬಿಸಿ ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನ ಎಂದರೆ ಸರಿಯಲ್ಲ. ನಿಪಿ1 ಚೆಕ್ ನಲ್ಲಿ ಇರುವ ಬರವಣಿಗೆ ಮತ್ತು ಸಹಿಗಳ ಶಾಹಿ ಒಂದೇ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ1 ಚೆಕ್ ನಲ್ಲಿ ಇರುವ ಬರವಣಿಗೆ ಹಾಗೂ ಸಹಿ ಎರಡನ್ನು ನಾನೇ ತುಂಬಿಸಿರುತ್ತೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-
ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,
ತರೀಕೆರೆ.

ಸಾಕ್ಷಿಯ ಸಹಿ::